# ಮನುಷ್ಯ ಮತ್ತು ದೇವರು

■ ಹಿಂದಿ ಮೂಲ: **ಕಮಲೇಶ್ವರ್**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಸಂತೋಷ್ ಸಸಿಹಿತ್ಲು



ಅದೊಂದು ವಿಚಿತ್ರ ವಿಸ್ಮಯಕಾರಿ ಮತ್ತು ಬೆರಗುಗೊಳಿಸುವ ದೃಶ್ಯವಾಗಿತ್ತು. ಭಾದ್ರಪದ ಮಾಸ ಮತ್ತು ಕೃಷ್ಣ ಜನ್ಮಾಷ್ಟಮಿಯ ದಿನವಾಗಿತ್ತು. ನೀರನ್ನೂ ಕುಡಿಯದೆ ವ್ರತವನ್ನು ಪಾಲಿಸುತ್ತಿದ್ದ ಲಕ್ಷಾಂತರ ಜನರ ಗುಂಪು ಕೃಷ್ಣ ಜನ್ಮಾಷ್ಟಮಿಯ ಮಹೋತ್ಸವದಲ್ಲಿ ಭಾಗವಹಿಸಲು ಬಂದಿದ್ದರು. ಶ್ರೀಕೃಷ್ಣರ ದೇವಸ್ಥಾನಗಳ ಎದುರು ಸಾವಿರಾರು ಶ್ರದ್ಧಾಳುಗಳ ಗುಂಪು ಕಲೆತಿತ್ತು. ಅಲ್ಲಲ್ಲಿ ಕೀರ್ತನೆ ಮತ್ತು ಕೃಷ್ಣಲೀಲೆಗಳ ದೃಶ್ಯಗಳು ಕಾಣಬರುತ್ತಿದ್ದವು. ಕೃಷ್ಣರ ಲೀಲೆ ಅಪರಂಪಾರ, ಅದಕ್ಕೇ ಶ್ರೀಕೃಷ್ಣರು ಏಕಮಾತ್ರ ಪೂರ್ಣಾವತಾರಿ ದೇವರೆಂಬ ವಿಶ್ವಾಸವಿತ್ತು. ಉಳಿದ ಅವತಾರಗಳೆಲ್ಲವೂ ಅರ್ಧಂಬರ್ಧವಾಗಿವೆ; ಇದು ಶ್ರೀಕೃಷ್ಣರ ವಿಶೇಷತೆಯಾಗಿದ್ದು, ಅವರು ಯಾವಾಗ, ಏನು ಮಾಡುತ್ತಾರೆಂದು ಯಾರೂ ಹೇಳಲಾರರು. ಅವರು ಭೌತಿಕತೆಯನ್ನು ಯಾವಾಗ ಹೇಗೆ ಆಧ್ಯಾತ್ಮಿಕತೆಯಲ್ಲಿ ಬದಲಿಸುತ್ತಾರೆ ಮತ್ತು ಕರ್ಮವನ್ನು ಜೀವನ ಸಿದ್ಧಾಂತದ ಕೇಂದ್ರವನ್ನಾಗಿ ಮಾಡುತ್ತಾರೆ ಹಾಗೂ ಅವರು ಯಾವಾಗ ಸಾಮಾನ್ಯ ಮನುಷ್ಯರಾಗುತ್ತಾರೆ ಎಂಬುದನ್ನು ಹೇಳಲಾಗದು.

ಈ ಗುಂಪಿನಿಂದ ಪ್ರತ್ಯೇಕವಾಗಿದ್ದ ಒಂದು ಪೆಂಡಾಲಿನಲ್ಲಿ ಶ್ರೀಕೃಷ್ಣರ ಅನನ್ಯ ಭಕ್ತೆ ಮೀರಾಬಾಯಿಯ ಬಗ್ಗೆ ಪ್ರವಚನ ನಡೆಯುತ್ತಿತ್ತು.